Govt. of Karnataka ಅನುಬಂಧ-ಎ [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆ ಸಿ.ಸಿಃ 180/2020**

| ದಿನಾಂಕ 11.11.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | | |
|---|---|---|---|
| **C.W.** | **1** | **P.W.** | **1** |
| **ಹೆಸರು** | ಕೆಂಚಮ್ಮ | | |
| **ತಂದೆಯ/ಗಂಡನ ಹೆಸರು** | ರಾಜಣ್ಣ | | |
| **ವಯಸ್ಸು** | 32 | | |
| **ಉದ್ಯೋಗ** | ಗೃಹಿಣಿ | | |
| **ವಾಸ** | ಶಿರಾ | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. 17.09.2019 ರಂದು ನಾನು ಸಿದ್ದರಸನಹಳ್ಳಿಯ ನಮ್ಮ ಮನೆಯಲ್ಲಿ ಇದ್ದು, ನನ್ನ ಗಂಡ ಕಳ್ಳಂಬೆಳ್ಳದಲ್ಲಿ ಕೆಲಸವಿದೆ ಎಂದು ಹೋಗಿದ್ದು, ಮಧ್ಯಾಹ್ನ 1.15 ರ ಸಮಯದಲ್ಲಿ ನಮ್ಮ ಊರಿನ ಕಾಮಣ್ಣ ಎನ್ನುವವರ ದೂರವಾಣಿ ಕರೆ ಮಾಡಿ, ನನ್ನ ಗಂಡನಿಗೆ ಅಪಘಾತವಾಗಿರುವ ವಿಚಾರವನ್ನು ತಿಳಿಸಿದ್ದು, ನನ್ನ ಗಂಡನನ್ನು ಶಿರಾ ಆಸ್ಪತ್ರೆಯಲ್ಲಿ ದಾಖಲು ಮಾಡಿರುವ ವಿಚಾರವನ್ನು ತಿಳಿದು, ಕೂಡಲೇ ಹೋಗಿ ನೋಡಿದಾಗ ನನ್ನ ಗಂಡನ ಕೈ ಕಾಲು ಮತ್ತು ಬೆನ್ನಿಗೂ ಸಹ ರಕ್ತಗಾಯಗುಳು ಉಂಟಾಗಿತ್ತು. ವೈಧ್ಯರ ಸಲಹೆಯ ಮೇರೆಗೆ ತುಮಕೂರಿನ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತೇವೆ. ತದನಂತರ ಅಪಘಾತವನ್ನು ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕನಿಂದ ಆಗಿದೆ ಎಂದು ತಿಳಿದುಬಂದ ಮೇರೆಗೆ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಸಹಕರಿಸಿದ ಕಾರಣ ಮಾನ್ಯ ಸ.ಸ.ಆ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ- ಎ.ಪಿ.ಪಿ. ರವರಿಂದಃ**

1. ಸದರಿ ದಿನಾಂಕದಂದು ನನ್ನ ಗಂಡನನ್ನು ಅಪಘಾತದ ಬಗ್ಗೆ ವಿಚಾರಿಸಿದ್ದು, ನನ್ನ ಗಂಡ ಶಿರಾಗೆ ಬರಲು ಮೈಸೂರು ರಸ್ತೆಯಲ್ಲಿ ಕಳ್ಳಂಬೆಳ್ಳ ಬಸ್ ನಿಲ್ದಾಣದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಸಂಖ್ಯೆ ಕೆಎ.09.ಎಫ್.5179 ನೇ ದನ್ನು ಹತ್ತಿಕೊಂಡು ಶಿರಾಗೆ ಬರುತ್ತಿರುವಾಗ ಶಿರಾ ದೊಡ್ಡಕೆರೆ ಹಿಂಭಾಗ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ, ರಸ್ತೆಯ ಮಧ್ಯೆ ಡಿವೈಡರ್ ಮೇಲೆ ಬಸ್ಸನ್ನು ಹತ್ತಿಸಿದ ಕಾರಣ ಹಿಂಭಾಗದ ಡೋರ್ ಓಪನ್ ಆಗಿ ಹಿಂಭಾಗದ ಸೀಟಿನಲ್ಲಿ ಕುಳಿತಿದ್ದಂತಹ ನನ್ನ ಗಂಡ ರಸ್ತೆಯ ಮೇಲೆ ಬಿದ್ದು ಅಪಘಾತ ಉಂಟಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದೇನೆ ಎಂದರೆ ಸರಿ.

**ಪಾಟೀಸವಾಲುಃ- ಆರೋಪಿ ಪರ ಶ್ರೀ ಹೆಚ್.ಜಿ. ವಕೀಲರಿಂದಃ**

1. ಅಪಘಾತದ ಬಗ್ಗೆ ದೂರವಾಣಿ ಕರೆ ಬಂದಾಗ ಮಧ್ಯಾಹ್ನ 1.30 ಸಮಯವಾಗಿರುತ್ತದೆ. ಬಸ್ ಪಂಚಾರು ಆಗಿ ಡಿವೈಡರ್ ಗೆ ಹೊಡೆಯಲಾಗಿದೆ ಎಂದು ನಿಮಗೆ ವಿಚಾರವನ್ನು ತಿಳಿಸಿದ್ದರಾ ಎಂದರೆ ಸಾಕ್ಷಿಯು ಆ ದಿನ ನನ್ನ ಗಂಡನಿಗೆ ಅಪಘಾತವಾಗಿದೆ ಎಂದು ಮಾತ್ರ ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಹಿಂಭಾಗದ ಟೈಯರ್ ಪಂಚಾರು ಆಗಿ ಅಪಘಾತ ಉಂಟಾಗಿದೆ ಎಂದು ತಿಳಿಸಿದ್ದರು ಎಂದರೆ ಸರಿ. ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿದ್ದೇವೆ. ಅದೇ ದಿನ ದೂರನ್ನು ಕೊಟ್ಟಿದ್ದೇವೆ. ಪರಿಹಾರ ಪಡೆಯುವ ಉದ್ದೇಶದಿಂದ ನಮ್ಮ ಊರಿನ ಜನರು, ವೈದ್ಯಾಧಿಕಾರಿಗಳು ಮತ್ತು ಪೊಲೀಸರು ಶಾಮೀಲಾಗಿ ಸುಳ್ಳು ಕೇಸನ್ನು ದಾಖಲು ಮಾಡಿ ದೂರನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**